ದಿಃ 15-10-2015 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ವಾದಿ ಪರ ವಕೀಲರಾದ ಶ್ರೀ ಎಚ್.ವಿ.ಡಿ. ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ದಿಃ 24.06.1948 ರಂದು ಆದ ಕ್ರಯಪತ್ರದ ನಕಲನ್ನು ನಿಪಿ-1, ಸರ್ವೆ ನಂಃ 9/2 ಇದಕ್ಕೆ ಸಂಬಂಧಪಟ್ಟ ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ನಿಪಿ-2, ಉಪ ನೋಂದಣಿ ಅಧಿಕಾರಿ, ಹರಿಹರ ಇವರು ಕೊಟ್ಟ ಮೂರು ಋಣಬಾರ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-5, ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-6, ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ನಿಪಿ-7, ಆರ್.ಆರ್-5 ದೃಢೀಕೃತ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-8 ರಿಂದ ನಿಪಿ-16 ಎಂದು ಗುರುತಿಸಲಾಯಿತು. ನಾಲ್ಕು ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-17 ರಿಂದ ನಿಪಿ-20 ಎಂದು ಗುರುತಿಸಲಾಯಿತು.

ಈ ಸಮಯದಲ್ಲಿ ವಾದಿ ಪರ ವಕೀಲರಾದ ಶ್ರೀ ಎಚ್.ವಿ.ಡಿ. ಇವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.